
# ಅನಾಮಧೇಯ 'ಚಿನ್ನದುಂಗುರ'

■ ಡಿ.ಬಿ. ನಾಗರಾಜು
ಕಲೆ: ಸಂತೋಷ್ ಸಸಿಹಿತ್ಲು




ಬಂಗಾರದ ಬೆಲೆ ಬರೋಬ್ಬರಿ ಒಂದು ಗ್ರಾಂಗೆ ಹತ್ತು ಸಾವಿರ ರೂಪಾಯಿಯ ಆಸುಪಾಸು. ಅತ್ಯಾಪ್ತರು, ಹತ್ತಿರದ ನೆಂಟರು ಉಡುಗೊರೆಯಾಗಿ ಬಂಗಾರ ಕೊಡಲು ಹಿಂದೇಟು ಹಾಕುವಂತಹ ದುಬಾರಿ ದರ. ದಿನದಿಂದ ದಿನಕ್ಕೆ ಏರುತ್ತಲೇ ಇದೆ ಚಿನ್ನದ ಧಾರಣೆ... ಇಂತಹ ಹೊತ್ತಲ್ಲಿ ಒಂದು ತೊಲ ಚಿನ್ನದ ಉಂಗುರ ಬಳುವಳಿಯಾಗಿ ಸಿಕ್ಕರೆ... ಅದು ಕೊಟ್ಟವರು ಯಾರು ಎಂಬುದೇ ಗೊತ್ತಾಗದಿದ್ದರೆ...

ಗೃಹಪ್ರವೇಶದ ದಿನದಂದು ಹಾರೈಸಲು ಬಂದಿದ್ದ ಅಸಂಖ್ಯಾತರಲ್ಲಿ ಹಲವರು ನೀಡಿದ್ದ ಉಡುಗೊರೆಗಳನ್ನು ಒಂದೊಂದಾಗಿ ಬಿಚ್ಚಿನೋಡುವಾಗ ಚಿನ್ನದ ಉಂಗುರವನ್ನು ನೋಡಿದ ಡಾ. ಕೃಷ್ಣ ಒಂದರೆಕ್ಷಣ ಕಕ್ಕಾಬಿಕ್ಕಿಯಾದರು. ಕೃಷ್ಣ ಅವರಷ್ಟೇ ಅಲ್ಲ, ಜೊತೆಗಿದ್ದ ಪತ್ನಿ ರುಕ್ಮಿಣಿ, ಮಕ್ಕಳು ಸಹ ದಿಗ್ಭ್ರಮೆಗೊಳಗಾದರು. ಉಡುಗೊರೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಎಲ್ಲಿಯೂ ಯಾವೊಂದು ಕುರುಹು ಇಲ್ಲ. ಅನಾಮಧೇಯವಾಗಿತ್ತು ಚಿನ್ನದುಂಗುರ.

ಸಂಭ್ರಮವೇ ಮೇಳೈಸಿದ್ದ ಹೊಸ ಮನೆಯಲ್ಲಿ ಚಿಂತೆ ಕಾಡಲಾರಂಭಿಸಿತು. ಒಂದರ್ಧ ಗಂಟೆ ನೀರವ ಮೌನ. ರುಕ್ಮಿಣಿ ತನ್ನ ವಂಶಾವಳಿಯ ಶೋಧಕ್ಕಿಳಿದರೆ, ಡಾಕ್ಟರ್ ತನ್ನ ಮೂಲಕ್ಕಿಳಿದರು. ಉಡುಗೊರೆನೀಡಿದ್ದು ಯಾರು ಎಂಬುದೇ ಗೊತ್ತಾಗಲಿಲ್ಲ. ಎಷ್ಟು ಚಿಂತಿಸಿದರೂ ಫಲವಿಲ್ಲ; ಎಲ್ಲರೂ ನಾಲ್ಕೈದು ಬಾರಿ ತಲೆ ಕೆರೆದುಕೊಂಡರೂ ಯಾರೆಂಬುದು ಮಾತ್ರ ಪತ್ತೆಯಾಗಲಿಲ್ಲ.

ಬೇಸತ್ತ ರುಕ್ಮಿಣಿ ತನ್ನ ಮೊಬೈಲ್ ತೆಗೆದುಕೊಂಡು ತವರಿಗೆ ಫೋನ್ ಮಾಡಿದರು. ಅಪ್ಪ–ಅಮ್ಮ, ಅಣ್ಣ–ತಮ್ಮ, ಅಕ್ಕ–ತಂಗಿ, ಸೋದರ ಮಾವ... ಹೀಗೆ ಅತ್ಯಾಪ್ತ, ಒಡನಾಟದ ಸಂಬಂಧದಲ್ಲಿ ವಿಚಾರಿಸಿದರು. ಯಾರೊಬ್ಬರು ನಾವು ಕೊಟ್ಟಿಲ್ಲ. ಕೊಟ್ಟವರು ಯಾರೂ ನಮ್ಮ ಬಳಿ ಹೇಳಿಕೊಂಡಿಲ್ಲ ಎಂದರು. ಕೃಷ್ಣನದ್ದು ಇದೇ ಕಥೆ. ಅನಾಮಧೇಯ ಚಿನ್ನದುಂಗುರದ ಮೂಲ ಪತ್ತೆ ಹಚ್ಚುವಲ್ಲಿ ವೈದ್ಯರ ಕುಟುಂಬ ಸೋತಿತು. ಮಧ್ಯಾಹ್ನದ ಊಟ ಮುಗಿಯಿತು. ಸಂಜೆಯ ಕಾಫಿಯೂ ಆಯಿತು. ಚಿನ್ನದುಂಗುರದ ಮೂಲ ಗೊತ್ತಾಗಲಿಲ್ಲ. ಹುಡುಕುವುದೂ ನಿಲ್ಲಲಿಲ್ಲ. ಕ್ಷಣಕ್ಷಣಕ್ಕೂ ಚಡಪಡಿಕೆ. ಆದರೆ ಉತ್ತರ ದೊರೆಯದ್ದಾಗಿತ್ತು. ಮೊಬೈಲ್ ಫೋನ್‌ನ ಚಾರ್ಜ್ ಕಡಿಮೆಯಾಯಿತೆ ವಿನಾ, ಕೊಟ್ಟವರು ಯಾರೆಂಬುದು ಅರಿವಿಗೆ ಬರಲಿಲ್ಲ.

ಮಬ್ಬುಗತ್ತಲಾಗುತ್ತಿದ್ದಂತೆ ಎಲ್ಲರೂ ಮಬ್ಬಾದರು. ಸುಸ್ತಾಗಿ ಕೂತಲ್ಲೇ ತೂಕಡಿಸಿದರು. ಅಲ್ಲೇ ಪವಡಿಸಿದರು. ಒಂದರ್ಧ ಗಳಿಗೆಯ ಭರ್ಜರಿ ನಿದ್ದೆಯೂ ಆಯಿತು. ಎಚ್ಚರವಾದೊಡನೆ ಮತ್ತೆ ಮನೆ ಮಂದಿಯನ್ನು ಕಾಡಿದ್ದು ಅದೇ ಅನಾಮಧೇಯ ಚಿನ್ನದುಂಗುರ. ಈಗಾಗಲೇ ನೆಂಟರ ಪಟ್ಟಿಯೂ ಆಗಿತ್ತು. ಆಪ್ತೇಷ್ಟರು, ಒಡನಾಡಿಗಳೊಡನೆಯೂ ಮಾತುಕತೆ ಮುಗಿದಿತ್ತು. ಯಾರೊಬ್ಬರ ಬಳಿಯೂ ಉತ್ತರ ಸಿಗದಾಗಿತ್ತು. ಆದರೂ ಶೋಧ ನಿಲ್ಲಲಿಲ್ಲ.

ರಾತ್ರಿಗೆ ಊಟ ಏನಿದೆ ಎಂಬುದನ್ನು ತಿಳಿದುಕೊಳ್ಳಲು ರುಕ್ಮಿಣಿಯು ತನ್ನ ಪತ್ತೇದಾರಿ ಕೆಲಸವನ್ನು ನಿಲ್ಲಿಸಿ ಅಡುಗೆಮನೆಯತ್ತ ಹೆಜ್ಜೆಹಾಕಿದರು. ಮೂರ್ನಾಲ್ಕು ಹೆಜ್ಜೆ ಹಾಕುವಷ್ಟರಲ್ಲೇ ಏನೋ ನೆನಪಿಸಿಕೊಂಡವರಂತೆ; ಏನ್ರೀ... ಇಷ್ಟು ವರ್ಷದಲ್ಲಿ ನೀವು ಸಾಕಷ್ಟು ಜನರ ಜೀವ ಉಳಿಸಿದ್ದೀರಿ. ಅವರಲ್ಲಿ ಯಾರಾದರೂ ಒಬ್ಬರು ಈ ಉಂಗುರ ನೀಡಿರಬಹುದೇ ಎಂಬ ಅನುಮಾನದ ಪ್ರಶ್ನೆಯೊಂದನ್ನು ಪತಿಗೆ ಕೇಳಿದರು. ದಿನವಿಡೀ ಶೋಧಿಸಿ ಹತಾಶರಾಗಿದ್ದ ವೈದ್ಯರಿಗೆ ಪತ್ನಿಯ ಪ್ರಶ್ನೆಯು ನವಚೈತನ್ಯ ಪುಟಿಯುವಂತೆ ಮಾಡಿತು.

ಇಪ್ಪತ್ತೈದು ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಸೇವೆ ಸಲ್ಲಿಸುತ್ತಿದ್ದೇನೆ.